# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## -:ವಾರ್ಡ್-37ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-

ದಿನಾಂಕ: 02.01.2021 ರಂದು ಬೆಳಿಗ್ಗೆ 11.00 ಗಂಟೆಗೆ ವಾರ್ಡ್ ನಂ.37 ಯಶವಂತಪುರ ವಾರ್ಡ್‌ನ, ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.37ರ ವಾರ್ಡ್ ಕಛೇರಿ, ಮಾಡೆಲ್ ಕಾಲೋನಿ, 2ನೇ ಅಡ್ಡರಸ್ತೆಯ ಕಟ್ಟಡದಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾ ನಡವಳಿಗಳು

ಸಭೆಗೆ ಹಾಜರಿದ್ದ ಮಾನ್ಯ ಸದಸ್ಯರು:-

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಹುದ್ದೆ | ಪದನಾಮ | ಹಾಜರಾತಿ |
|---|---|---|---|---|
| 1 | ಶ್ರೀ ಎನ್. ಜಿ. ಉಮೇಶ್ | ಸ.ಕಾ.ನಿ.ಅ., | ಅಧ್ಯಕ್ಷರು/ ವಾರ್ಡ್ ನೋಡಲ್ ಅಧಿಕಾರಿ | ಹಾಜರಿದ್ದರು |
| 2 | ಶ್ರೀ ಯಶವಂತ್ ಸಿ. ವಿ. | ಸಹಾಯಕ ಅಭಿಯಂತರರು, | ಸದಸ್ಯ ಕಾರ್ಯದರ್ಶಿ | ಹಾಜರಿದ್ದರು |
| 3 | ಡಾ|| ಸುನೀತಾ | ವೈದ್ಯಾಧಿಕಾರಿಗಳು, ಪ್ರಾ. ಆ. ಕೇಂ. | ಸದಸ್ಯ ಕಾರ್ಯದರ್ಶಿ | ಹಾಜರಿದ್ದರು |
| 4 | ಡಾ|| ಹರ್ಷಿತ್ ಬಿ. ಎಂ. | ಕೋವಿಡ್ ವೈದ್ಯಾಧಿಕಾರಿಗಳು, ಪ್ರಾ. ಆ. ಕೇಂ. | ಸದಸ್ಯರು | ಹಾಜರಿದ್ದರು |
| 5 | ಶ್ರೀಮತಿ ಸುಜಾತಾ | ಹಿರಿಯ ಆರೋಗ್ಯ ಪರಿವೀಕ್ಷಕರು | ಸದಸ್ಯರು | ಹಾಜರಿದ್ದರು |
| 6 | ಶ್ರೀ ಗೋವಿಂದರಾಜು | ಕಂದಾಯ ವಸೂಲಿಗಾರರು | ಸದಸ್ಯರು | ಹಾಜರಿದ್ದರು |
| 7 | ಶ್ರೀ ಚನ್ನೇಶಪ್ಪ | ಸ.ಅ., ಬಿಡಬ್ಲ್ಯೂಎಸ್ಎಸ್‌ಬಿ | ಸದಸ್ಯರು | ಹಾಜರಿದ್ದರು |
| 8 | ಶ್ರೀ ಅನಿಲ್ | ಸ.ಅ., ಬೆಸ್ಕಾಂ | ಸದಸ್ಯರು | ಹಾಜರಿದ್ದರು |
| 9 | ಶ್ರೀ ಅಭಿಷೇಕ್ | ವಾರ್ಡ್ ಮಾರ್ಷಲ್ | ಸದಸ್ಯರು | ಹಾಜರಿದ್ದರು |
| 10 | ತಿರುಪಾಲ್ | ಮೇಲ್ವಿಚಾರಕರು | ಸದಸ್ಯರು | ಹಾಜರಿದ್ದರು |
| 11 | ಮುರಳಿ | ಮೇಲ್ವಿಚಾರಕರು | ಸದಸ್ಯರು | ಹಾಜರಿದ್ದರು |
| 12 | ಜಾನ್ ಬಿ. | ಮೇಲ್ವಿಚಾರಕರು | ಸದಸ್ಯರು | ಹಾಜರಿದ್ದರು |

ವಾರ್ಡ್-37ರ ವಾರ್ಡ್ ಸಮಿತಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಕಾರ್ಯದರ್ಶಿಯವರು ಸ್ವಾಗತಿಸಿ ವಾರ್ಡ್ ಸಮಿತಿ ಸಭೆಯ ಮಾರ್ಗಸೂಚಿಗಳನ್ನು ಸಭೆಗೆ ಸ್ಥೂಲವಾಗಿ ವಿವರಿಸಿದರು.

ಮಾನ್ಯ ಅಧ್ಯಕ್ಷರು, ಸಭೆಯ ಸದಸ್ಯರುಗಳನ್ನು ಪರಸ್ಪರ ಪರಿಚಯ ಮಾಡಿಸಿ, ಮಾರ್ಗಸೂಚಿಯಂತೆ, ಈ ಕೆಳಗಿನ ವಿಷಯಗಳನ್ನು ಸಭೆಯ ಮುಂದಿಟ್ಟು ವಾರ್ಡ್ ಸಮಿತಿ ಸಭೆಯು ನಿರ್ವಹಿಸಬೇಕಾದ ಅಂಶಗಳನ್ನು ತಿಳಿಸಿ, ಅನುಸರಿಸಬೇಕಾದ ಕ್ರಮಗಳನ್ನು ಈ ಕೆಳಕಂಡಂತೆ ಕ್ರಮವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

1) ಬೀದಿ ನಾಯಿಗಳ ಬಗ್ಗೆ:-

ಮಾನ್ಯ ಅಧ್ಯಕ್ಷರು ಮಾತನಾಡಿ, ವಾರ್ಡ್ ಪರಿಮಿತಿಯಲ್ಲಿ ಬೀದಿ ನಾಯಿಗಳ ಕಾಟ ಅತಿಯಾಗಿದ್ದು, ಸಾರ್ವಜನಿಕರಿಗೆ ಇದರಿಂದ ತೊಂದರೆಯಾಗುತ್ತಿದ್ದು, ಇವುಗಳ ನಿಯಂತ್ರಣಕ್ಕಾಗಿ, ಬಿಬಿಎಂಪಿ ಪಶುಪಾಲನಾ ವಿಭಾಗರವರಿಗೆ ಕ್ರಮವಹಿಸಲು ಸೂಚಿಸಿರುತ್ತಾರೆ.

2) ಆರೋಗ್ಯ ಇಲಾಖೆ:-

ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ, ವಾರ್ಡ್‌ನ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಕೋವಿಡ್ ವ್ಯಾಕ್ಸಿನ್ ಸಂಗ್ರಹಣೆ ಮಾಡಲು ಸಕಲ ಸಿದ್ಧತೆಗಳು ಸಮರೋಪಾದಿಯಲ್ಲಿ ನಡೆಯುತ್ತಿದ್ದು, ಕೊರೊನಾ ವಾರಿಯರ್ಸ್‌ಗಳಿಗೆ ಹಾಗೂ ಹಿರಿಯ ನಾಗರೀಕರಿಗೆ ಚುಚ್ಚುಮದ್ದು ನೀಡಲು ಮೊದಲ ಆದ್ಯತೆಯಿದ್ದು, ಕಂದಾಯ ಇಲಾಖೆ ಹಾಗೂ ಕಾಮಗಾರಿ ಇಲಾಖೆಯ ನೌಕರರುಗಳ ಪಟ್ಟಿಯನ್ನು ನೀಡಲು ವೈದ್ಯಾಧಿಕಾರಿಗಳು ಕೋರಿದರು. ಅಧ್ಯಕ್ಷರು ಮಾತನಾಡಿ ಹಾಜರಿದ್ದ ಕಂದಾಯ ವಸೂಲಿಗಾರರಿಗೆ ಕಂದಾಯ ಇಲಾಖೆಯ ಹಾಗೂ ವಾರ್ಡ್ ಸಹಾಯಕ ಅಭಿಯಂತರರಿಗೆ ಕಾಮಗಾರಿ ಇಲಾಖೆಯ ನೌಕರರುಗಳ ಪಟ್ಟಿಯನ್ನು ನೀಡಲು ಸೂಚಿಸಿದರು.

ವೈದ್ಯಾಧಿಕಾರಿಗಳಾದ ಡಾ|| ಸುನೀತಾರವರು ಮಾತನಾಡಿ, ಕೋವಿಡ್ ಲಸಿಕೆಯನ್ನು ನೀಡಲು ಎಲ್ಲಾ ಸಿದ್ಧತೆಗಳು ನಡೆಯುತ್ತಿದ್ದು, ಆಸ್ಪತ್ರೆಯಲ್ಲಿ ಒಳ ಹೋಗಲು ಹಾಗೂ ಹೊರಬರಲು ಪ್ರತ್ಯೇಕ ಪ್ರವೇಶ ವ್ಯವಸ್ಥೆ ಮಾಡಲು ಕೋರಿದ್ದು, ಇದಕ್ಕೆ ಸಂಬಂಧಿಸಿದಂತೆ, ಅಧ್ಯಕ್ಷರು ಮಾತನಾಡಿ, ವಾರ್ಡ್ ಸಹಾಯಕ ಅಭಿಯಂತರರಿಗೆ ಸ್ಥಳ ಪರಿಶೀಲನೆ ಮಾಡಿ ವರದಿ ನೀಡಲು ಸೂಚಿಸಿದರು. ವಾರ್ಡ್ ವ್ಯಾಪ್ತಿಯಲ್ಲಿ 05 ಸರ್ಕಾರಿ ಶಾಲೆಗಳಲ್ಲಿ ಕೋವಿಡ್ ಲಸಿಕೆಯನ್ನು ನೀಡಲು ಸರ್ಕಾರ ಆದೇಶ ಹೊರಡಿಸಿರುವುದರಿಂದ, ವಾರ್ಡ್ ವ್ಯಾಪ್ತಿಯಲ್ಲಿ ಒಟ್ಟು ಮೂರು ಸರ್ಕಾರಿ ಶಾಲೆಗಳಿದ್ದು, ಬಾಕಿ 02 ಸರ್ಕಾರಿ ಶಾಲೆಗಳ ಕೊರತೆಯಿದ್ದು, ಖಾಸಗಿ ಶಾಲೆಗಳು ಸ್ಪಂದಿಸಿದಲ್ಲಿ, ಸದರಿ ಶಾಲೆಯ ಸ್ಯಾನಿಟೈಸೇಷನ್ ಮಾಡಿ ಲಸಿಕೆಯನ್ನು ನೀಡಲು ಉಪಯೋಗಿಸಿಕೊಳ್ಳಲು ಮಾನ್ಯ ಅಧ್ಯಕ್ಷರು ಸೂಚಿಸಿದರು.

ಪಲ್ಸ್ ಪೋಲಿಯೋ ಲಸಿಕೆಯ ದಿನಾಂಕವು 17 ರಿಂದ 20ನೇ ತಾರೀಕಿನಲ್ಲಿ ಇದ್ದು, 16 ಮತ್ತು 17 ರಂದು ಆಟೋವಿನ ಮೂಲಕ ಬಹಿರಂಗವಾಗಿ ಧ್ವನಿವರ್ಧಕಗಳ ಮೂಲಕ ಪೋಲಿಯೋ ಲಸಿಕೆ ಬಗ್ಗೆ ಜಾಗೃತಿ ಮೂಡಿಸಲು ವೈದ್ಯಾಧಿಕಾರಿಗಳು ಸಭೆಗೆ ತಿಳಿಸಿದರು. ನಾಲ್ಕು ದಿನಗಳಿಗೆ 100 ಮಾಸ್ಕ್, 200 ಗ್ಲೌಸ್, 20 ಸ್ಯಾನಿಟೈಸರ್, 16 ಕೇಸ್ ವಾಟರ್ ಬಾಟಲ್‌ಗಳ ವ್ಯವಸ್ಥೆಗಳನ್ನು ಮಾಡಿಕೊಳ್ಳಲು ವಾರ್ಡಿನ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸಭೆಯಲ್ಲಿ ಸೂಚಿಸಿದರು. ಸ್ವಯಂ ಸೇವಕರಿಗೆ ನಾಲ್ಕು

ದಿನಗಳಂದು ಊಟದ ವ್ಯವಸ್ಥೆ ಮಾಡಿಕೊಡಲು ಇಂದಿರಾ ಕ್ಯಾಂಟೀನ್‌ರವರಿಗೆ ತಿಳಿಸಲು ಅಧ್ಯಕ್ಷರು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು.

ಪ್ರಾಥಮಿಕ ಆರೋಗ್ಯ ಕೇಂದ್ರದ ಎದುರು ಹೆಚ್ಚು ಆಟೋಗಳು ಜಮಾವಣೆಯಾಗುತ್ತಿರುವ ಆರೋಗ್ಯ ಸಿಬ್ಬಂದಿಗಳು ಸಭೆಯಲ್ಲಿ ದೂರು ನೀಡಿದರು. ಇದರಿಂದಾಗಿ ಸಾರ್ವಜನಿಕರಿಗೆ ಓಡಾಡುವುದಕ್ಕೆ ಬಹಳ ತೊಂದರೆಯಾಗುತ್ತಿರುವುದು ಕಂಡುಬಂದಿದ್ದು, ಸದರಿ ದೂರಿನ ಕುರಿತು ಪೋಲಿಸ್ ಇಲಾಖೆಯವರಿಗೆ ಹಾಗೂ ವಾರ್ಡ್ ಮಾರ್ಷಲ್‌ಗಳಿಗೆ ಕ್ರಮವಹಿಸಲು ಸೂಚಿಸಲಾಯಿತು.

3) ಪೌರ ಕಾರ್ಮಿಕರ ಬಗ್ಗೆ:

ಲಕ್ಷ್ಮಿ, ಪೌರ ಕಾರ್ಮಿಕರ ವೇತನ ಪಾವತಿಯಾಗಿರುವುದಿಲ್ಲ ಎಂದು ಹಿರಿಯ ಆರೋಗ್ಯ ಪರಿವೀಕ್ಷಕರು ಸಭೆಗೆ ತಿಳಿಸಿದರು. ಇದರ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡಿ, ಸಂಬಂಧಪಟ್ಟ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಘನತ್ಯಾಜ್ಯ) ರವರಿಗೆ ಕ್ರಮವಹಿಸಲು ಸೂಚಿಸುವುದಾಗಿ ತಿಳಿಸಿದರು. ಲಿಂಕ್ ವರ್ಕರ್‌ಗಳ ವೇತನವು ವೇತನ ಪಾವತಿಯಾಗಿರುವುದಿಲ್ಲ ಎಂದು ಹಿರಿಯ ಆರೋಗ್ಯ ಪರಿವೀಕ್ಷಕರು ಸಭೆಗೆ ತಿಳಿಸಿದರು. ಇದರ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡಿ, ಸಂಬಂಧಪಟ್ಟ ಅಧಿಕಾರಿಗೆ ಕರೆ ಮಾಡಿ ಅತಿ ಜರೂರಾಗಿ ವೇತನವು ಮಾಡಿಕೊಡಲು ಸೂಚಿಸಿದರು.

4) ಬೀದಿ ಬದಿ ವ್ಯಾಪಾರಿಗಳ ತೆರವುಗೊಳಿಸುವ ಬಗ್ಗೆ:-

ಯಶವಂತಪುರ 1ನೇ ಮುಖ್ಯರಸ್ತೆ ಹಾಗೂ ಬಜಾರ್ ಸ್ಟ್ರೀಟ್ ರೋಡಲ್ಲಿ ಬೀದಿ ಬದಿ ವ್ಯಾಪಾರಿಗಳು ರಸ್ತೆ ಬದಿಯಲ್ಲಿ ತಮ್ಮ ತಳ್ಳುವ ಗಾಡಿಗಳನ್ನು ಇಟ್ಟು ವ್ಯಾಪಾರವನ್ನು ಮಾಡುತ್ತಿರುವುದರಿಂದ ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಕಂಡುಬಂದಿರುವುದರಿಂದ ಅವುಗಳನ್ನು ತೆರವುಗೊಳಿಸಲು ವಾರ್ಡಿನ ಸಹಾಯಕ ಅಭಿಯಂತರರು ಹಾಗೂ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು.

5) ಕಂದಾಯ ಇಲಾಖೆ:

ಕಂದಾಯ ವಸೂಲಿಗಾರರು ಮಾತನಾಡಿ, ಇಲಾಖೆಯಿಂದ ಜಾರಿ ಮಾಡಲಾದ ನೋಟೀಸ್ ವಾರೆಂಟ್‌ಗಳಿಗೆ ಸಂಬಂಧಪಟ್ಟಂತೆ 4.00 ಲಕ್ಷಗಳ ಕಂದಾಯವನ್ನು ವಸೂಲಿ ಮಾಡಿದ್ದು, ಪ್ರಸ್ತುತ 40.00 ಲಕ್ಷ, ಬಾಕಿ ಕಂದಾಯ 50.00 ಲಕ್ಷ ಒಟ್ಟು 90.00 ಲಕ್ಷಗಳ ಕಂದಾಯವು ವಾರ್ಡಿನಲ್ಲಿ ಬಾಕಿ ಇರುವುದು ಎಂದು ತಿಳಿಸಿದರು.

**6) ಬಿಡಬ್ಲ್ಯೂಎಸ್‌ಎಸ್‌ಬಿ :**

ವಾರ್ಡ್ ವ್ಯಾಪ್ತಿಯಲ್ಲಿ ಮ್ಯಾನ್‌ಹೋಲ್‌ಗಳ ಸುತ್ತ ಹೊಸ ರಿಂಗ್‌ಗಳನ್ನು ಅಳವಡಿಸುತ್ತಿರುವುದರಿಂದ, ಸದರಿ ಕಾರ್ಯ ಮಾಡುವ ಗುತ್ತಿಗೆದಾರರು ಎಲ್ಲಾ ಕಾಮಗಾರಿ ಪೂರ್ಣಗೊಂಡ ನಂತರ ಡೆಬ್ರಿಸ್‌ಗಳನ್ನು ರಸ್ತೆಯಲ್ಲೇ ಬಿಟ್ಟಿದ್ದು ತೆರವುಗೊಳಿಸದಿರುವ ಕಾರಣ, ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಕಂಡುಬಂದಿದ್ದು, ಅದರಂತೆ, ಸಭೆಗೆ ಹಾಜರಿದ್ದ ಬಿಡಬ್ಲ್ಯೂಎಸ್‌ಎಸ್‌ಬಿ ಸಹಾಯಕ ಅಭಿಯಂತರರಿಗೆ ತಿಳಿಸಿ, ಗುತ್ತಿಗೆದಾರರಿಗೆ ಸದರಿ ಡೆಬ್ರಿಸ್‌ಗಳನ್ನು ತುರ್ತಾಗಿ ತೆರವುಗೊಳಿಸುವಂತೆ ಸೂಚಿಸಲಾಯಿತು.

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Yashwanth C.V
(ಯಶವಂತ್ ಸಿ. ವಿ.)
ಸಹಾಯಕ ಅಭಿಯಂತರರು ಹಾಗೂ
ಸದಸ್ಯ ಕಾರ್ಯದರ್ಶಿ
ವಾರ್ಡ್ ಸಂಖ್ಯೆ:37

(ಎಸ್. [illegible])
ಸ.ಕಾ.ನಿ.ಅ. ಹಾಗೂ
ವಾರ್ಡ್ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ:37